# ಅಕ್ಷರಗಳು ಕೇವಲ ಸತ್ಯವನ್ನೇ ಹೇಳಬೇಕು

## ಅಪಾಯಕಾರಿ ಸುಳ್ಳುಗಳು ಸಾಹಿತ್ಯದಲ್ಲಿ ಇರಬಾರದು: ಸಾಹಿತಿ ಕಂಬಾರ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಬ್ರಿಟಿಷ್ ಶಿಕ್ಷಣ ತಜ್ಞ ಲಾರ್ಡ್ ಮೆಕಾಲೆ ಭಾರತೀಯಸಂಸ್ಕೃತಿವಿನಾಶಕ್ಕೆಪರೋಕ್ಷವಾಗಿ ಕಾರಣವಾಗಿದ್ದರೂ ಇಲ್ಲಿನ ಪ್ರತಿಯೊಬ್ಬರಿಗೂ ಶಿಕ್ಷಣ ಸಿಗುವಂತೆ ಮಾಡುವ ಮೂಲಕ ದೊಡ್ಡ ಉಪಕಾರ ಮಾಡಿದ್ದಾರೆ ಎಂದು ಜ್ಞಾನಪೀಠ ಪುರಸ್ಕೃತ ಡಾ| ಚಂದ್ರಶೇಖರ ಕಂಬಾರ ಅಭಿಪ್ರಾಯಪಟ್ಟರು.




ಸಾಹಿತ್ಯ ಅಕಾಡೆಮಿ ದಕ್ಷಿಣ ಪ್ರಾದೇಶಿಕ ಕೇಂದ್ರ, ಮತ್ತು ಕರ್ನಾಟಕ ಪ್ರಕಾಶಕರ ಸಂಘ ಕನ್ನಡ ಸಾಹಿತ್ಯ ಪರಿಷತ್ತು ಸಭಾಂಗಣದಲ್ಲಿ ನಡೆದ ವಿಶ್ವ ಪುಸ್ತಕ ಮತ್ತು ಕೃತಿಸ್ವಾಮ್ಯ ದಿನಾಚರಣೆಯಲ್ಲಿ ಅವರು ಮಾತನಾಡಿದರು.

ಈ ಹಿಂದೆ ಪ್ರತಿಯೊಬ್ಬರೂ ಶಿಕ್ಷಣ ಕಲಿಯುವುದಕ್ಕೆ ನಮ್ಮಲ್ಲಿ ಅವಕಾಶ ಇರಲಿಲ್ಲ. ಊರಲ್ಲಿ ಒಬ್ಬರೋ ಇಬ್ಬರೋ ಶಿಕ್ಷಣ ಪಡೆದವರು ಇರುತ್ತಿದ್ದರು. ಆದರೆ ಲಾರ್ಡ್ ಮೆಕಾಲೆ ಭಾರತಕ್ಕೆ ಬಂದ ಮೇಲೆ ಕ್ರಾಂತಿ ಮಾಡಿದ. ಬ್ರಿಟಿಷರು ರಚಿಸಿದ ಸಮಿತಿಯಲ್ಲಿ ಭಾರತೀಯರ ಪರವಾಗಿ ವೋಟು ಹಾಕಿ ದೇಶದಲ್ಲಿ ಇಂಗ್ಲಿಷ್ ಶಿಕ್ಷಣ ಸಿಗುವಂತೆ ಮಾಡಿದ್ದರಿಂದ ಪ್ರತಿ ಹಳ್ಳಿಗೂ ಶಾಲೆಗಳು ಬಂದವು. ರೈಲು, ಅಂಚೆ, ಬಸ್, ಕಾಲೇಜುಗಳುಆರಂಭಗೊಂಡವು. ದಲಿತರು, ಬಡವರು ಸುಶಿಕ್ಷಿತರಾದರು. ಹೀಗಾಗಿ 1898ರಲ್ಲಿ ಪುಸ್ತಕಗಳು ಬಂತು. ಪುಸ್ತಕ ಸಂಸ್ಕೃತಿ ಶುರುವಾಗಿ ದೊಡ್ಡ ಕ್ರಾಂತಿಯನ್ನೇ ಮಾಡಿತು ಎಂದರು.

### ಪುಸ್ತಕೋದ್ಯಮದ ಮೇಲೆ ಜಿಎಸ್‌ಟಿ ಬೇಡ

ಕಸಾಪ ನಿಕಟಪೂರ್ವ ಅಧ್ಯಕ್ಷ ಡಾ| ಮನು ಬಳಿಗಾರ್ ಮಾತನಾಡಿ, ಪುಸ್ತಕೋದ್ಯಮದಿಂದ ಬರುವ ಲಾಭ ನಗಣ್ಯ. ಇದರಲ್ಲೂ ಲಾಭಾಂಶ ನೋಡಬೇಕೆಂಬ ಸರ್ಕಾರದ ಧೋರಣೆ ಸರಿಯಲ್ಲ. ಪುಸ್ತಕೋದ್ಯಮದ ಮೇಲೆ ಜಿಎಸ್‌ಟಿ ಮತ್ತು ರಾಜಧನ ಹೇರುವುದನ್ನು ಹಿಂದೆ ವಿರೋಧಿಸಿದಂತೆ ಈಗಲೂ ಸರ್ಕಾರದ ಧೋರಣೆಯನ್ನು ತೀವ್ರವಾಗಿ ಖಂಡಿಸುತ್ತೇನೆ. ಪುಸ್ತಕೋದ್ಯಮದ ಅಭಿವೃದ್ಧಿಗೆ ಪೂರಕವಾಗಿ ಸರ್ಕಾರಗಳು ಕಾರ್ಯ ಯೋಜನೆ ರೂಪಿಸಬೇಕು. 2019ರಿಂದ ಸರ್ಕಾರ ಪುಸ್ತಕ ಖರೀದಿಯನ್ನೇ ನಿಲ್ಲಿಸಿದೆ. ಈಗಲಾದರೂ 2018ರಿಂದ ಆಯ್ಕೆಯಾದ ಪುಸ್ತಕಗಳಿಗೆ 15 ದಿನಗಳೊಳಗೆ ಹಣ ಬಿಡುಗಡೆ ಮಾಡಲು ಕ್ರಮಕೈಗೊಳ್ಳಬೇಕು. ಸಂಕಷ್ಟದಲ್ಲಿರುವ ಪುಸ್ತಕೋದ್ಯಮಿಗಳ ಪರವಾಗಿ ಸರ್ಕಾರ ನೆರವಿಗೆ ನಿಲ್ಲಬೇಕು ಎಂದು ಮನವಿ ಮಾಡಿದರು.





ವಸಂತಾ ಶ್ರೀನಿವಾಸ್



ಪ್ರಕಾಶ್

ಕರ್ನಾಟಕಕ್ಕೆ ಪುಸ್ತಕದ ವಿಚಾರ ಹೊಸದಲ್ಲ. 10ನೇ ಶತಮಾನದ ಅತ್ತಿಮಬ್ಬೆ ಅವರು ರನ್ನನ ಶಾಂತಿ ಪುರಾಣದ ಒಂದು ಸಾವಿರ ಪುಸ್ತಕಗಳನ್ನು ಮುದ್ರಿಸಿ ಹಂಚಿದ್ದರು. ಪುಸ್ತಕ ಸಂಸ್ಕೃತಿ ಇನ್ನಷ್ಟು ಅಭಿವೃದ್ಧಿಯಾಗಬೇಕು. ಮಾಧ್ಯಮಗಳು ಸೃಷ್ಟಿಸುವ ಅಪಾಯಕಾರಿ ಸುಳ್ಳುಗಳು ಸಾಹಿತ್ಯದಲ್ಲಿ ಇರಬಾರದು. ಅಕ್ಷರಗಳು ಸತ್ಯವನ್ನೇ ಹೇಳಬೇಕು. ಕೇವಲ ಸತ್ಯವನ್ನಷ್ಟೇ ಹೇಳಬೇಕು ಎಂದು ಸಲಹೆ ನೀಡಿದರು.

ಇದೇ ಸಂದರ್ಭದಲ್ಲಿ ನಂಜನಗೂಡು ತಿರುಮಲಾಂಬ ಪ್ರಕಾಶನ ಪ್ರಶಸ್ತಿಯನ್ನು ಬೆಂಗಳೂರಿನ ವಸಂತ ಪ್ರಕಾಶನದ ವಸಂತಾ ಶ್ರೀನಿವಾಸ್ ಅವರಿಗೆ ಮತ್ತು ಗೋಪಾಲಕೃಷ್ಣ ಅಡಿಗ ಪುಸ್ತಕ ಪ್ರಚಾರಕ ಪ್ರಶಸ್ತಿಯನ್ನು ಬೆಳಗಾವಿಯ ಗ್ರಂಥಪಾಲಕರಾದ ಪ್ರಕಾಶ್ ಗಿರಿಮಲ್ಲಣ್ಣನವರ್ ಅವರಿಗೆ ಪ್ರದಾನ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಪ್ರಕಾಶಕರ ಸಂಘದ ಅಧ್ಯಕ್ಷ ಪ್ರಕಾಶ್ ಕಂಬತ್ತಳ್ಳಿ, ಪ್ರಧಾನ ಕಾರ್ಯದರ್ಶಿ ನ.ರವಿಕುಮಾರ್, ಸಂಘಟನಾ ಕಾರ್ಯದರ್ಶಿ ಸೃಷ್ಟಿ ನಾಗೇಶ್, ಸಾಹಿತ್ಯ ಅಕಾಡೆಮಿ ಪ್ರಾದೇಶಿಕ ಕಾರ್ಯದರ್ಶಿ ಮಹಾಲಿಂಗೇಶ್ವರ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.